ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 140.

ಮೃತಪಟ್ಟ ಕುರುಬರ ಬಂಡಾರಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ನರಸುಹ್ಮ ಮೈಸರ್, ಗಾರ್ಡಿಯಾ ಇವನ ತಾತ ಹುಚ್ಚೇಗವುಡರು, ಮೃತಪಟ್ಟ ಸದರೀ ಬಂಡಾರಿಗೆ ಮಗ ಚಿಕ್ಕಪ್ಪ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ತಾಲ್ಲೂಕು ಕಡಬೂರು ಸ್ಥಳವ ಸದರೀ ಹುಚ್ಚೇಗವುಡರು ಸದರೀ ವಾಸಸ್ಥರಾಗಿ ಮೃತ ಪಟ್ಟ ಬಂಡಾರಿಯ ಜೆಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹುಚ್ಚೇಗವುಡರ ಅರ್ಜಿಯನ್ನು 1889ನೇ ಇಸವಿ ಜುಲೈ ತಿಂಗಳು ತಾರೀಖು 19ರಲ್ಲು ಕೇಳಿ ಸರ ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಂಡಾರಿಯ ಆಸ್ತಿಗೆ ಹಕ್ಕುದಾರರಾದ ವಿಸಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂಯು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 143.

ಅರ್ಜೀದಾರ ರಂಗಮ್ಮನವರು, ಮೈನರಾದ ಮೈಸೂರು ದೇವರಾಜಪೊಹಲಾ ಚಲುವಾಂಬು ಅಗ್ರಹಾರ ಸ್ಥಳದ ಶ್ರೀನಿವಾಸರಾಫ್ ವಾಜಾರ್ಯ ಮಗ ಶ್ರೀನಿವಾಸಅಯ್ಯಂಗಾರ್ಯ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಶ್ರೀನಿವಾಸಯ್ಯಂಗಾರ್ಯಿಗೆ ಆಜ್ಞೀ ಆಗಬೇಕೆಂಬ ಹಕ್ಕಿನಮೇಲೆ ಸದರೀ ಚಲುವಾಂಬಾ ಅಗ್ರಹಾರ ಸ್ಥಳದ ರಂಗ ಮ್ಮನವರು ಸದರೀ ಮೈನರಿನ ಆಸ್ತೀ ಕಾವಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀಕೊಟ್ಟು ಇರುತ್ತಾನೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1889ನೇ ಇಸವಿ ಆಗಸ್ಟ್ ತಾರೀಖು 14ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿ ಸ್ ಕೊಡಲಾಗಿದೆ.

1889ನೇ ಇಸವಿ ಅರ್ಜೀ ನಂಬರ್ 151.

ಮೃತಪಟ್ಟ ನರಸೀಪುರದ ನಾಗಪ್ಪಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಶ್ರೀನಿವಾಸಯ್ಯನವರು, ಮೃತಪಟ್ಟ ಸದರೀ ನಾಗಪ್ಪಯ್ಯನವರಿಗೆ ಅಂಣ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮ ಕೂಡ್ಲು ನರಸೀಪುರದ ಸ್ಥಳದ ಸದರೀ ಶ್ರೀನಿವಾಸಯ್ಯನವರು ಸದರೀವಾಸಸ್ಥರಾಗಿ ಮೃತಪಟ್ಟ ನಾಗಪ್ಪಯ್ಯನವರ ಜೆಂದಗಿ ಬಗ್ಯಾಗಿ ಬ ರತಕ್ಕ 70 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸಯ್ಯನವರ ಅರ್ಜಿಯನ್ನು 1889ನೇ ಇಸವಿ ಆಗಸ್ಟ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಪ್ಪಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1889ನೇ ಇಸವಿ ಜುಲೈ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್, ಡಿಸ್ಟ್ರಿಕ್ಟು ಜಡ್ಜ್.

ಮೈಸೂರು ಸೆಶ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ನಜರ್‌ಬಾದಿನಲ್ಲಿ ಇರುವ ಗೋವಿಂದರಾಜ ಮೊದಲ್ಯಾರ್ರ ವಿಷಯದಲ್ಲಿ—

ಸ್ಯ 1888ನೇ ಇಸವಿ ದಿವಾಳೀ ಕೇಸ್ ನಂಬರ್ 288.

ಹುಕುಂ.

ಮೇಲ್ಕಂಡ ಗೋವಿಂದರಾಜ ಮೊದಲ್ಯಾರನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಗೋವಿಂದರಾಜ ಮೊದಲ್ಯಾರ್ರ ಪರವಾಗಿ 1ನೇ ಗ್ರೇಡ್ ಪ್ಲೀಡರ್ ಮೆ॥ ಸದಾಶಿವರಾಯರನ್ನು ಮತ್ತು ಸದರೀಯ ವನ ಲೇಣೇದಾರ್ರಾದ 1ನೇ ನೋಮನುಂದರ ಮೊದಲ್ಯಾರ್ ಕಡೆ 1ನೇ ಗ್ರೇಡ್ ಪ್ಲೀಡರ್ ಮೆ॥ ವೆಂಕಟರಾಮಯ್ಯನವರಿಗೂ ದರ್ಖಾಸ್ತೀ ಮಾ ಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರುತಮಗೆ ಈ ದರ್ಖಾಸ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ:—2ನೇ ಹುಂಡೀ ಕೃಷ್ಣಮಾಚಾರ್ ಕಡೆ ಮೆ॥ ಗೋವಿಂದರಾಯರು, 3ನೇ ವರ್ಧಮಾನ ಪಂಡಿತ, 4ನೇ ಬಾರ್ಗಮೊರ್ಷ ಬ್ಯಾಂಕ್, 5ನೇ ರಾಮಚಂದ್ರಬ್ಯಾಂಕ್, 6ನೇ ಕೃಷ್ಣಬಾಯಿ, 7ನೇ ಸರ್ವಜನವರ್ಧನಿಬ್ಯಾಂಕು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಗೋವಿಂದರಾಜವ್ಹೊಲ್ಯಾರನು ಹೊಂದುವ ದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆ ಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿವೇಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1889ನೇ ಇಸವಿ ಜೂನ್ 12ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯುಬಂದ ಅವರುಗಳ ವಾಸಸ್ಥಳ.	ಸಾಲದ ಮೊಬಲಗು.	ಯಾವಾಗ ದೇಣೇ ಕೊಟ್ಟದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಯಿದ್ದರೆ.	ಷರಾ.
1	ಬೆಂಗಳೂರು ಸೋಮಸುಂದರ ಮೊದಲ್ಯಾರ್ ..	3111—8—0	..	..	
2	ಹುಂಡೀ ಕೃಷ್ಣಮಾಚಾರ್	3785—0—0	..	ಅಧಾರ ದಸ್ತಾವೇಜು ಬಾಬತು	
3	ವರ್ದಮಾನ ಪಂಡಿತ	600—0—0	..	ಛಾಪಾ ದಸ್ತಾವೇಜು ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ತಾರೀಖು 8ನೇ ಜುಲೈ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟು ಮಜಕೂರು ಮಂಡ್ಯ ತಾಲ್ಲೂಕು ಗ್ರಾಮಾಂತ್ರಗಳ ಸರಕಾರೀ ಬಂಜರು ಜಮೀನುಗಳಲ್ಲಿ ಯಿರುವ ಕುರಂಗದ ಕಲ್ಲುಗಳನ್ನು ಜಮಾಯಿಸಿಕೊಳ್ಳುವ ಗುತ್ತಿಗೆಯನ್ನ 1889ನೇ ಇಸವಿ ಆಗಸ್ಟು ತಾರೀಖು 15 ರಲ್ಲು ಮಂಡ್ಯ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂಬರೂ ಪೋಟಾಪೋಟಿಯಿಂದ ಹರಾಜು ಮಾಡಿಸುತ್ತಾಗಿ ಇಚ್ಛೆಯುಳ್ಳ ಜನಗಳು ಹಾಜರಾಗಿ ಚಡ ದರಖಾಸ್ತು ಮೂಲಕ ಪಡೆಯಬಹುದು.

2. ಈ ಕಂಟ್ರಾಕ್ಟು ವಾಯಿದೆಯು 1890ನೇ ಇಸವಿ ಮಾರ್ಚಿ ಅಖೈರುವರಿಗೆ ಪೂರ್ತಿಯಾಗಿರುತ್ತೆ.

3. ಚಡ ಸವಾಲ್‌ದಾರನು ತನ್ನ ಬೀಟು ಮೊಬಲಗ್ ಪೈಕಿ ನಾಲ್ಕರಲ್ಲಿ ಒಂದು ಭಾಗವನ್ನ ಠೇವಣಿಯಾಗಿ ತಕ್ಷಣವೇ ಹಾಜರ್ಮಾಡಬೇಕು, ಮಿಕ್ಕಿದ ಮೊಬಲಗನ್ನು ಪದಾಜು ಡೇಟ್ ಲಾಗಾಯಿತು 15 ದಿವಸಗಳ ಒಳಗಾಗಿ ಪಾವತೀ ಮಾಡಬೇಕು ಇದಕ್ಕೆ ತಪ್ಪಿದರೆ ಹಾಜರ್ಮಾಡಿದ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು. ಡಿಪಾಜಿಟ್ ಹಾಜರ್ಮಾಡದೇ ಯಿದ್ದಾಗ್ಯೂ ಅಥವಾ ಬಾಕೀ ಮೊಬಲಗು ಪಾವತೀಮಾಡದೇ ತಪ್ಪಿದಾಗ್ಯೂ ಈ ಬಾಬು ಪುನಹಾ ಹರಾಜು ಮಾಡಲ್ಪಟ್ಟು ಅದರಿಂದ ಮಿಂಟುಗುವ ನಷ್ಟಕ್ಕೆ ಮೊದಲ್ ಚಡ ಸವಾಲ್‌ದಾರನು ಗುರಿಯಾಗಿರುವನು, ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆ ಮೇರಿಗೆ ಲೋಕಲ್‌ಸೆಸ್ಸು ಸಹ ಚಡ ಸವಾಲ್‌ದಾರನು ಕೊಡಬೇಕು.

4. ಈ ಹರಾಜ್ ದಿವ್ರಾ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

5. ಇಜಾರ್‌ದಾರನು ಸರ್ಕಾರದ ಬಂಜರು ಜಮೀನುಗಳಲ್ಲಿ ಇರುವ ಹುಲ್ಲನ್ನು ಪುಲ್ಲು ಇಜಾರೆ ಮಾಡಿಕೊಂಡವರು ಮೇಯಿಸಿಕೊಳ್ಳುವದಕ್ಕೆ ಅಭ್ಯಂತರ ಪಡಿಸಕೂಡದು.

6. ಸರ್ಕಾರದ ಬಂಜರು ಜಮೀನುಗಳನ್ನು ನಗದೀಯಾತಿಗೆ ದರಖಾಸ್ತು ಬಂದಿದ್ದರ ಮೇಲೆ ಸರ್ಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಯಿಜಾರ್‌ದಾರನು ಅಡ್ಡಿ ಮಾಡಕೂಡದು.

7. ಈ ಕಲ್ಲುಗಳನ್ನು ಜಮಾಯಿಸುವದಕ್ಕೋಸ್ಕರ ಜಮೀನುಗಳಲ್ಲಿ ಗುಂಡಿಗಳು ಮಾಡಿ ಅರೂಪ ಪಡಿಸಕೂಡದು, ಹಾಗೆ ಮಾಡಿದ್ದುದರೆ ಅಂಥಾ ಗುಂಡಿಗಳನ್ನು ತಕ್ಷಣವೆ ಯಿಜಾರ್‌ದಾರನು ಹಾತ್‌ಲಾಗವಡಿನಿಂದ ಮುಚ್ಚಿ ಪೂರ್ವದ ಸ್ಥಿತಿಗೆ ತರುವದಕ್ಕೆ ಬದ್ಧನಾಗಿರಬೇಕು.

8. ಇಜಾರ್‌ದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನೆ ಆಯಾ ಹಿಡುವಳೀದಾರ್ರ ಅನುಮತಿ ವಿನಹ ಆರಿಸಿ ಕೊಳ್ಳಕೂಡದು, ತನ್ನ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕೆ ಆಗಲಿ ಅಥವಾ ಇಜಾರ್‌ದಾರ್ ವಿನಹ ಇತರರಿಗೆ ವಿಕ್ರಯಿಸುವದಕ್ಕೆ ಆಗಲಿ ಹಿಡುವಳೀದಾರ್ರಿಗೆ ಅಧಿಕಾರ ಇರುವದಿಲ್ಲವು.

ಟಿ. ಆನಂದರಾವ್,
ಡೆಪ್ಯೂಟಿ ಕಮ್ಮಿಷನರ್.